**2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ.**

**ದಿಃ 21.11.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ 2 ನೇ ಎದುರುದಾರ ಪರ ಶ್ರೀ ಎಂ ಪಿ ಟಿ ವಕೀಲರಿಂದಃ**

ಅರ್ಜಿದಾರರಿಗೆ ನಾನೇ ಸರ್ಜರಿ ಮಾಡಿರುತ್ತೇನೆ. ನಮ್ಮ ಆಸ್ಪತ್ರೆಗೆ ಬರುವ ಮುಂಚೆ ಅರ್ಜಿದಾರರು ನರೆಗಲ್ ನರ್ಸಿಂಗ್ ಹೋಂ ಹುಬ್ಬಳ್ಳಿಯಲ್ಲಿ ಚಿಕಿತ್ಸೆ ಪಡೆದುಕೊಂಡು ಬಂದಿದ್ದರು. ಸದರಿ ಆಸ್ಪತ್ರೆಯಲ್ಲಿ ಅವರಿಗೆ ಪ್ರಾಥಮಿಕ ಚಿಕಿತ್ಸೆ ಮಾತ್ರ ನೀಡಿದ್ದರು ಯಾವುದೇ ಶಸ್ತ್ರ ಚಿಕಿತ್ಸೆ ನೀಡಿರುವುದಿಲ್ಲ. ಅರ್ಜಿದಾರರ ಮೂಳೆ ಮುರಿತ ರೀಯುನಿಯನ್ ಆಗಿದೆ ಎಂದರೆ ಸರಿ. ನಮ್ಮ ಆಸ್ಪತ್ರೆಯಿಂದ ಬಿಡುಗಡೆಯಾದ ನಂತರ ಅರ್ಜಿದಾರರು ನಮ್ಮ ಹತ್ತಿರ ಫಾಲೋ ಅಪ್ ಚಿಕಿತ್ಸೆಗೆ ಬಂದಿಲ್ಲ ಎಂದರೆ ಸರಿಯಲ್ಲ. ನನ್ನ ಹತ್ತಿರ ಅಂಗನ್ಯೂನ್ಯತಾ ಮಾಪನ ಮಾಡಿಕೊಳ್ಳಲು ಬಂದಾಗ ಅರ್ಜಿದಾರರು ಬೇರೆಯವರ ಸಹಾಯ ಪಡೆದುಕೊಂಡು ಬಂದಿದ್ದರು ಆದರೆ ಯಾವುದೇ ಸಲಕರಣೆಯನ್ನು ಹಿಡಿದುಕೊಂಡು ಬಂದಿರಲಿಲ್ಲ. ಅರ್ಜಿದಾರರ ಅಂಗನ್ಯೂನ್ಯತಾ ಮಾಪನ ಮಾಡುವ ಸಮಯದಲ್ಲಿ ನಾನು ಅವರಿಗೆ ಕ್ಲೀನಿಕಲ್ ಎಕ್ಸಾಮಿನೇಶನ್ ಮಾಡಿರುತ್ತೇನೆ. ಸದರಿ ಸಮಯದಲ್ಲಿ ನಾನು ಎಕ್ಸರೇ ತೆಗೆದಿರುತ್ತೇನೆ. ನಾನು ಸದರಿ ಸಮಯದಲ್ಲಿ ತೆಗೆದಿರುವ ಎಕ್ಸರೇಯನ್ನು ನನ್ನ ಅಭಿಪ್ರಾಯದ ಜೊತೆ ಹಾಜರಪಡಿಸಿಲ್ಲ ಎಂದರೆ ಸರಿ. ನಾನು ಅರ್ಜಿದಾರರಿಗೆ ಕ್ಲೀನಿಕಲ್ ಎಕ್ಸಾಮಿನೇಶನ್ ಮಾಡುವಾಗ ಅವರ ಹಳೇಯ ಎಕ್ಸರೇ ಹಾಗೂ ನಾನು ಅಂಗನ್ಯೂನ್ಯತೆ ಮಾಡುವಾಗ ಪಡೆದ ಎಕ್ಸರೇಗಳನ್ನು ಹೋಲಿಕೆ ಮಾಡಿ ನೋಡಿರುತ್ತೇನೆ. ಅರ್ಜಿದಾರರಿಗೆ upper limb ಗೆ ಮಾತ್ರ ಶಸ್ತ್ರ ಚಿಕಿತ್ಸೆ

ನೀಡಿರುತ್ತದೆ ಎಂದರೆ ಸರಿ. ಅವರ lower limb ಗೆ ಯಾವುದೇ ಸಮಸ್ಯೆ ಇಲ್ಲ ಎಂದರೆ ಸರಿ. ಅರ್ಜಿದಾರರಿಗೆ ಮೂಳೆ ಮುರಿತ reunite ಆದ ಕಾರಣ ಅವರಿಗೆ ಈಗ ಯಾವುದೇ ಅಂಗನ್ಯೂನ್ಯತೆ ಇಲ್ಲ ಎಂದರೆ ಸರಿಯಲ್ಲ. ನಾನು ಅಂಗನ್ಯೂನ್ಯತೆ ಮಾಪನ ಮಾಡುವ ಸಮಯದಲ್ಲಿ ಯುನಿಯನ್ ಅಫ್ ಇಂಡಿಯಾರವರು ನೀಡಿದ ಗೈಡ್ ಲೈನ್ಸ ಪಾಲಿಸಿರುತ್ತೇನೆ. ನಾನು ಅಲಿಂಕೋ ಮೆಥೆಡ್ ಅಳವಡಿಸಿಕೊಂಡಿಲ್ಲ. ಅರ್ಜಿದಾರರಿಗೆ ಸಹಾಯ ಮಾಡುವ ಉದ್ದೇಶದಿಂದ ನಾನು ಅವರಿಗೆ ಹೆಚ್ಚಿನ ಪ್ರತಿಶತ ತೋರಿಸಿ ಸುಳ್ಳು ಅಂಗನ್ಯೂನ್ಯತೆ ಪ್ರಮಾಣಪತ್ರ ನೀಡಿರುತ್ತೇನೆ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

Sd/-

**2 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.**